# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.24 ರ ಹೆಚ್.ಬಿ.ಆರ್ ಲೇಔಟ್‌ಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 08-12-2020 ರಂದು ಆಯೋಜಿಸಿದ್ದು, ಸದರಿ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದವರ ವಿವರ:-**

1. ಶ್ರೀ.ಹೆಚ್.ವಿ.ನರೇಂದ್ರ ಕುಮಾರ್, ADTP (North) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ
2. ಶ್ರೀ.ಎಸ್.ರಾಜನ್, ಕಾರ್ಯದರ್ಶಿ
3. ಶ್ರೀ.ಎಸ್.ಜೆ.ತೋಳ್ಪಾಡಿ, ವಾರ್ಡ್ ಸಮಿತಿಯ ಸದಸ್ಯರು.
4. ಶ್ರೀ.ರಾಕೇಶ್.ಎಸ್.ಜಿ, ವಾರ್ಡ್ ಸಮಿತಿಯ ಸದಸ್ಯರು.
5. ಶ್ರೀ. ಮೊಹಮ್ಮದ್ ಇಬ್ರಾಹಿಮ್, (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಇಲಾಖೆ
6. ಶ್ರೀ ಶ್ರೀಕಾಂತ್ ಅಸೆಸರ್, ಕಂದಾಯ ಇಲಾಖೆ,
7. ಶ್ರೀಮಾನ್, ಅನಿಮಲ್ ಹಸ್ಬೆಂಡ್ರಿ
8. ಶ್ರೀ ಲಿಂಗರಾಜು, ಮಾರ್ಷಲ್,
9. ಶ್ರೀ.ಮದನ್ ಪ್ರಸಾದ್ ವಾರ್ಡ್ ಸಮಿತಿಯ ಸದಸ್ಯರು.
10. ಶ್ರೀಮತಿ. ಮೀನಾ.ಬಿ, ಕಿರಿಯ ಆರೋಗ್ಯ ಪರಿವೀಕ್ಷಕರು ವಾ-24
11. ಶ್ರೀ. ಪ್ರಸನ್ನ.ಎ.ಆರ್, ವಾರ್ಡ್ ಸಮಿತಿಯ ಸದಸ್ಯರು.
12. ಶ್ರೀ.ವಿಕ್ರಂ.ಎಂ.ವಿ, ಸ್ಥಳೀಯರು,
13. ಶ್ರೀ ಪ್ರತಾಪ್, ಸ್ಥಳೀಯರು,
14. ಶ್ರೀ ನಟರಾಜ್, ಸ್ಥಳೀಯರು
15. ಶ್ರೀ ವಿನೋದ್, ಸ್ಥಳೀಯರು,
16. ಶ್ರೀ ಗಂಗಾಧರ್, ಸ್ಥಳೀಯರು,
17. ಶ್ರೀ ಶಾಜಿ, ಸ್ಥಳೀಯರು,
18. ಶ್ರೀ ಪಿಚಾಂಡಿ, ಸ್ಥಳೀಯರು,
19. ಶ್ರೀ ನಾರಾಯಣಸ್ವಾಮಿ, ಸ್ಥಳೀಯರು,

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

1) **ಶ್ರೀ ಪ್ರತಾಪ್, ಸ್ಥಳೀಯರು ಈ ಕೆಳಕಂಡ ವಿಷಯಗಳ ಬಗ್ಗೆ ವಾರ್ಡ್ ಕಮಿಟಿ ಸಭೆಯಲ್ಲಿ ಪ್ರಸ್ತಾಪಿಸಿದರು.**

- 14ನೇ ಮುಖ್ಯರಸ್ತೆ ಇಂದ 19ನೇ ಮುಖ್ಯರಸ್ತೆ, 5ನೇ ಬ್ಲಾಕ್‌ನಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ನಿಗಮ ರವರು ಕುಡಿಯುವ ನೀರನ್ನು ದಿನಕ್ಕೆ ಮೂರು (03) ಬಾರಿ ಬಿಡುತ್ತಿರುತ್ತಾರೆ ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ 18ನೇ ಮುಖ್ಯರಸ್ತೆ, ಕೆ.ಇ.ಬಿ ರಸ್ತೆ ಹಾಗೂ ಕೆಲವು ಪ್ರದೇಶಗಳಲ್ಲಿ ಸಾರ್ವಜನಿಕರು ಚರಂಡಿ ನೀರನ್ನು ಬೃಹತ್ ನೀರುಗಾಲುವೆಗೆ ಬಿಡುತ್ತಿರುವುದರಿಂದ ದುರ್ವಾಸನೆ ಬರುತ್ತಿದ್ದು, ಬೃಹತ್ ನೀರುಗಾಲುವೆ ಅಕ್ಕ ಪಕ್ಕದ ನಿವಾಸಿಗಳಿಗೆ ವಾಸನೆಯಿಂದ ತೊಂದರೆಯಾಗುತ್ತಿರುವುದನ್ನು ತಡೆಗಟ್ಟಲು

ಸಭೆಯಲ್ಲಿ ಪ್ರಸ್ತಾಪಿಸಿದರು ಹಾಗೂ 18ನೇ ಮುಖ್ಯರಸ್ತೆಯಲ್ಲಿ ಚೇಂಬರ್ ಹಾಳಾಗಿದ್ದು, ಅದನ್ನು ಸರಿಪಡಿಸಬೇಕು.

- ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ಹಾಳಾಗಿದ್ದು, ಅದನ್ನು ಸರಿಪಡಿಸಲು (ಎಲ್.ಇ.ಡಿ) ಹಾಗೂ ಕೆಲವು ಪ್ರದೇಶದಲ್ಲಿ ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು.
- ವಾರ್ಡ್ ವ್ಯಾಪ್ತಿಯ 5ನೇ ಬ್ಲಾಕಿನಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿದ್ದು, ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಚರಂಡಿಯಲ್ಲಿ ಹಾಕಲಾಗಿದ್ದು, ಇದರಿಂದ ಚರಂಡಿಯ ನೀರು ಶೇಖರಣೆಯಾಗಿ ಸುತ್ತಮುತ್ತ ವಾಸಿಸುತ್ತಿರುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ, ಕೂಡಲೇ ಅದನ್ನು ತೆರವುಗೊಳಿಸಲು ಸಭೆಗೆ ತಿಳಿಸಿದರು ಹಾಗೂ ಬಿಡಿಎ ಖಾಲಿ ನಿವೇಶನದಲ್ಲಿ ಕಸವನ್ನು ಎಸೆಯುತ್ತಿದ್ದು, ಇದನ್ನು ಕೂಡಲೇ ತೆರವುಗೊಳಿಸಬೇಕು.
- ವಾರ್ಡ್ ವ್ಯಾಪ್ತಿಯಲ್ಲಿ ಚಿಕನ್ ಮತ್ತು ಮಟನ್ ಅಂಗಡಿ ಮಾಲೀಕರು ತಮ್ಮ ತಮ್ಮ ಅಂಗಡಿ ತ್ಯಾಜ್ಯವನ್ನು ಬೃಹತ್ ನೀರುಗಾಲುವೆಗೆ ಸುರಿಯುತ್ತಿರುವುದರಿಂದ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಚರಂಡಿಯ ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆಯಾಗುತ್ತಿದ್ದು, ಅದನ್ನು ತಡೆಗಟ್ಟಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಗೇಲ್ ಗ್ಯಾಸ್‌ನವರು ಕೇಬಲ್‌ಗಳನ್ನು ಅಳವಡಿಸಲು ಗುಂಡಿಗಳನ್ನು ಅಗೆದು ರಸ್ತೆಗಳನ್ನು ಪುನರ್ ನಿರ್ಮಾಣ ಮಾಡದೇ ಇರುವುದರಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದಾಗಿ, ಹಾಗೂ ಸದರಿ ಅಗೆದ ರಸ್ತೆಗಳನ್ನು ಪುನರ್ ನಿರ್ಮಾಣ ಮಾಡಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- 5ನೇ ಬ್ಲಾಕ್, 19ನೇ ಮುಖ್ಯರಸ್ತೆಯಲ್ಲಿ ರಾತ್ರಿ ಸಮಯದಲ್ಲಿ ಅನೈತಿಕ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿದ್ದು, ಸದರಿ ಪ್ರದೇಶದಲ್ಲಿ ಪೋಲೀಸ್ ಗಸ್ತನ್ನು ಹೆಚ್ಚಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು.
- 19ನೇ ಮುಖ್ಯರಸ್ತೆಯಲ್ಲಿ ಅಪಘಾತ ನಡೆದಿದ್ದು, ಸದರಿ ಅಪಘಾತದ ಬಗ್ಗೆ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಸಂಚಾರಿ ಪೋಲೀಸ್‌ರವರು ನೀಡಲು ತಿಳಿಸಿದರು.
- 5ನೇ ಬ್ಲಾಕಿನಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲು ತಿಳಿಸಿದರು.
- ಚಿಲ್ಡ್ರನ್ ಪಾರ್ಕ್‌ನಲ್ಲಿ ಹೊಸದಾಗಿ ಬೀದಿ ದೀಪಗಳನ್ನು ಅಳವಡಿಸಬೇಕು.

1) <u>ಶ್ರೀ ವಿಕ್ರಂ, ಸ್ಥಳೀಯರು ಈ ಕೆಳಕಂಡ ವಿಷಯಗಳ ಬಗ್ಗೆ ವಾರ್ಡ್ ಕಮಿಟಿ ಸಭೆಯಲ್ಲಿ ಪ್ರಸ್ತಾಪಿಸಿದರು.</u>

- 2ನೇ ಮತ್ತು 3ನೇ ಬ್ಲಾಕಿನಲ್ಲಿ ಪೌರ ಕಾರ್ಮಿಕರು ಕಸವನ್ನು ಮನೆ ಮನೆಗಳಿಂದ ಸಮರ್ಪಕವಾಗಿ ಸಂಗ್ರಹಿಸದೇ ಇರುವುದಿಲ್ಲವೆಂದು ಹಾಗೂ ರಸ್ತೆಗಳನ್ನು ಸರಿಯಾಗಿ ಗುಡಿಸುವುದಿಲ್ಲ ಬ್ಲಾಕ್ ಸ್ಪಾಟ್‌ಗಳನ್ನು ಸ್ವಚ್ಛಗೊಳಿಸಬೇಕು, ಖಾಲಿ ನಿವೇಶನದಲ್ಲಿ ಸಾರ್ವಜನಿಕರು ಕಸವನ್ನು ಎಸೆಯುತ್ತಿರುತ್ತಾರೆ, ಹಾಗೂ ವಾರ್ಡ್‌ನಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆ ಕಡಿಮೆ ಇರುವುದರಿಂದ ಸಮರ್ಪಕವಾಗಿ ಕಸ ನಿರ್ವಹಣೆ ಕಾರ್ಯ ನಡೆಯುತ್ತಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

- ಕೆ.ಪಿ.ಟಿ.ಸಿ.ಎಲ್ ರವರು ರಸ್ತೆಯನ್ನು ಕತ್ತರಿಸಿದ್ದು, ಅದನ್ನು ಸರಿಪಡಿಸಲು ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಕೆಲವು ಪ್ರದೇಶಗಳಲ್ಲಿ ಬೀದಿ ದೀಪಗಳು 24/7 ಉರಿಯುತ್ತಿದ್ದು, ಇದರಿಂದ ವಿದ್ಯುತ್ ಪೋಲಾಗುತ್ತಿರುವುದನ್ನು ತಡೆಗಟ್ಟಲು ಸಭೆಗೆ ತಿಳಿಸಿದರು.
- ಬೃಹತ್ ನೀರುಗಾಲುವೆ ರವರು ತಂತಿಬೇಲಿಯನ್ನು ಕತ್ತರಿಸಿರುತ್ತಾರೆ. ಇದರ ಪಕ್ಕದ ರಸ್ತೆಯಲ್ಲಿ ಮಕ್ಕಳು ಆಟವಾಡುತ್ತಿದ್ದು, ಇದರಿಂದ ಏನಾದರು ಅನಾಹುತ ಸಂಭವಿಸಿದಲ್ಲಿ ಬೃಹತ್ ನೀರುಗಾಲುವೆ ರವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ತಿಳಿಸಿದರು.
- 10ನೇ ಮುಖ್ಯರಸ್ತೆ, 3ನೇ ಬ್ಲಾಕ್‌ನಲ್ಲಿ ಕುಡಿಯುವ ನೀರು ಪೋಲಾಗುತ್ತಿದ್ದು, ಕೂಡಲೇ ಸರಿಪಡಿಸಬೇಕು ಹಾಗೂ ನೀರು ಬಿಡುವಾಗ ವಾಟರ್ ಇನ್ಸ್‌ಪೆಕ್ಟರ್ ರವರು ಪರಿಶೀಲನೆ ಮಾಡಬೇಕು ಎಂದು ತಿಳಿಸಿದರು.
- 8ನೇ ಮುಖ್ಯರಸ್ತೆಯನ್ನು ಬಿಡಬ್ಲ್ಯೂ.ಎಸ್.ಎಸ್.ಬಿ ರವರು ರಸ್ತೆಯಲ್ಲಿ ಅಗೆಯುತ್ತಿದ್ದು, ಅದನ್ನು ಕೂಡಲೇ ಸರಿಪಡಿಸಬೇಕು.
- ಬಿಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ರವರು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ತಿಳಿಸಿದರು.
- GLR Water tank ನಿಂದ ಯಾವ ಯಾವ ಬ್ಲಾಕಿಗೆ ನೀರು ಸರಬರಾಜು ಮಾಡುತ್ತಿರುವ ಬಗ್ಗೆ ಮಾಹಿತಿ ನೀಡಲು ತಿಳಿಸಿದರು.
- ರಸ್ತೆ ಬದಿಯಲ್ಲಿ ಹಾಳಾಗಿರುವ ವಾಹನಗಳನ್ನು ರಸ್ತೆಯಲ್ಲಿಯೇ ಬಿಟ್ಟಿರುತ್ತಾರೆ. ಇವುಗಳನ್ನು ಸಂಚಾರಿ ಪೋಲೀಸ್ ರವರು ಕೂಡಲೇ ಅವುಗಳನ್ನು ತೆರವುಗೊಳಿಸಬೇಕು ಹಾಗೂ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ತಿಳಿಸಿದರು.

2) <u>ಶ್ರೀ ನಟರಾಜ್, ಸ್ಥಳೀಯರು ಈ ಕೆಳಕಂಡ ವಿಷಯಗಳ ಬಗ್ಗೆ ವಾರ್ಡ್ ಕಮಿಟಿ ಸಭೆಯಲ್ಲಿ ಪ್ರಸ್ತಾಪಿಸಿದರು.</u>

   - 1ನೇ ಮುಖ್ಯರಸ್ತೆಯನ್ನು ಸ್ಮಾರ್ಟ್ ಸಿಟಿಯಾಗಿ ಮಾಡಬೇಕು ಹಾಗೂ ಬೋರ್‌ವೆಲ್ ವಾಟರ್ ಟ್ಯಾಂಕ್‌ನಲ್ಲಿ ಸರಬರಾಜು ಮಾಡಿ, ರಸ್ತೆಯನ್ನು ಹಾಳು ಮಾಡುತ್ತಿರುತ್ತಾರೆ. ಅದನ್ನು ತಡೆಯಬೇಕು
   - ಬೃಂದಾವನ್ ಹೋಟೆಲ್ ಎದುರು ಕುಡಿಯುವ ನೀರು ಪೋಲಾಗುತ್ತಿದೆ ಹಾಗೂ ಬೀದಿ ದೀಪಗಳನ್ನು ಸರಿಪಡಿಸಬೇಕು.
   - ವಾರ್ಡ್ ಸಭೆಗೆ ಸಂಬಂಧಪಟ್ಟ ನೌಕರರು ಹಾಗೂ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಬೇಕೆಂದು ತಿಳಿಸಿದರು.

3) <u>ಶ್ರೀ ವಿನೋದ್, ಸ್ಥಳೀಯರು ಮಾತನಾಡುತ್ತಾ,</u> 3ನೇ ಎ ಮುಖ್ಯರಸ್ತೆಯ ಚರಂಡಿಯಲ್ಲಿ ಹೂಳು ತುಂಬಿದ್ದು, ಅದನ್ನು ತೆರವುಗೊಳಿಸಬೇಕು.

- ವಾರ್ಡ್ ವ್ಯಾಪ್ತಿಯಲ್ಲಿ ಮೇಜರ್ ರಸ್ತೆಗಳು ತುಂಬಾ ಇದ್ದು, ಪಾದಾಚಾರಿ ಮಾರ್ಗ ಹಾಗೂ ಚರಂಡಿಗಳು ಇಲ್ಲದೇ ಇರುವುದರಿಂದ ಪಾದಾಚಾರಿಗಳು ರಸ್ತೆಗಳಲ್ಲಿ ಓಡಾಡುತ್ತಿದ್ದು, ಅಪಘಾತಗಳಾಗುವ ಸಂಭವ ಇರುತ್ತದೆ ಆದುದರಿಂದ ಸದರಿ ರಸ್ತೆಗಳಲ್ಲಿ ಹೊಸದಾಗಿ ಪಾದಾಚಾರಿ ಮಾರ್ಗ ಹಾಗೂ ಚರಂಡಿಗಳನ್ನು ನಿರ್ಮಾಣ ಮಾಡಲು ತಿಳಿಸಿದರು. ಹಾಗೂ 80 ಅಡಿ ರಸ್ತೆಯಲ್ಲಿ ಮಳೆ ನೀರು ಶೇಖರಣೆಯಾಗುತ್ತಿದ್ದು, ಅದನ್ನು ಸರಿಪಡಿಸಬೇಕು.
- 6ನೇ, 8ನೇ ಮತ್ತು 8ನೇ ಬಿ ಮುಖ್ಯರಸ್ತೆಗಳಲ್ಲಿ ಹೂಳು ತುಂಬಿದ್ದು, ಕೂಡಲೇ ತೆರವುಗೊಳಿಸಬೇಕು.
- ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ರಸ್ತೆಯನ್ನು ಕತ್ತರಿಸಿದ್ದು, ಸದರಿ ರಸ್ತೆಯನ್ನು ಪುನರ್‌ನಿರ್ಮಾಣ ಮಾಡಲು ಪಾಲಿಕೆಗೆ ಯಾವುದೇ ಹಣ ಪಾವತಿಸಿರುವುದಿಲ್ಲ. ಆದರೆ ಅಗೆದ ರಸ್ತೆಗಳನ್ನು ಡಾಂಬರೀಕರಣ ಯಾವ ಇಲಾಖೆಯವರು ನಿರ್ವಹಿಸುತ್ತಾರೆ ಎಂದು ಕೇಳಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಬೃಹತ್ ನೀರುಗಾಲುವೆ ಇಲಾಖೆಯವರು ಹೂಳನ್ನು ತೆಗೆಯಲು ತಂತಿಬೇಲಿಯನ್ನು ಕತ್ತರಿಸಿರುತ್ತಾರೆ. ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳ್ಳುತ್ತೆ, ಹಾಗೂ ತಂತಿಬೇಲಿಯನ್ನು ಮೂರು (3) ತಿಂಗಳಿನಿಂದ ಸರಿಪಡಿಸಿರುವುದಿಲ್ಲ. ಇದನ್ನು ಬೃಹತ್ ನೀರುಗಾಲುವೆ ಇಲಾಖೆಯ ಶ್ರೀ ಶ್ರೀನಿವಾಸ್, ಸಹಾಯಕ ಇಂಜಿನಿಯರ್ ರವರು ಮುಂದಿನ ಸಭೆಗೆ ಹಾಜರಾಗಿ, ಈ ಮಾಹಿತಿಯನ್ನು ನೀಡಬೇಕೆಂದು ತಿಳಿಸಿದರು.
- ಶ್ರೀಮತಿ ಜ್ಯೋತಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರು ಘನತ್ಯಾಜ್ಯ ನಿರ್ವಹಣೆ ಬಗ್ಗೆ ಬರುವ ಕುಂದು ಕೊರತೆಗಳನ್ನು ಸರಿಪಡಿಸಲು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ತಿಳಿಸಿದರು.
- ಸರ್ವಿಸ್ ರಸ್ತೆಯಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ತಡೆಗಟ್ಟಲು ತಿಳಿಸಿದರು.
- ಅಯೋಧ್ಯ ಸರ್ಕಲ್, ಹೆಚ್..ಬಿ ಪೆಟ್ರೋಲ್ ಪಂಪ್ ಹಾಗೂ ಬಿಡಿಎ ಕಾಂಪ್ಲೆಕ್ಸ್ ಪ್ರದೇಶದಲ್ಲಿ ಟ್ರಾಫಿಕ್ ಸಿಗ್ನಲ್‌ಅನ್ನು ಅಳವಡಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.
- 2ನೇ ಮತ್ತು 3ನೇ ಬ್ಲಾಕಿನಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಬೇಕೆಂದು ಸಭೆಗೆ ತಿಳಿಸಿದರು
- 1ನೇ ಮತ್ತು 2ನೇ ಮುಖ್ಯರಸ್ತೆ ಹಾಗೂ 3ನೇ ಬ್ಲಾಕಿನಲ್ಲಿ ಬೀದಿ ದೀಪಗಳನ್ನು ಸರಿಪಡಿಸಬೇಕು ಹಾಗೂ ವಾರಕ್ಕೆ ಒಂದು ಬಾರಿ ತಪಾಸಣೆ ಮಾಡಲು ಹಾಗೂ ಶ್ರೀ ಆನಂದ್, ಅಭಿಯಂತರರು (ಬೀದಿ ದೀಪಗಳ ನಿರ್ವಹಣೆ) ರವರು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ತಿಳಿಸಿದರು.
- ಹೊರವರ್ತುಲ ರಸ್ತೆಯ ಅರಣ್ಯ ಪಾರ್ಕ್ ಹತ್ತಿರ ಸ್ಕೈ ವಾಕ್‌ನ್ನು ನಿರ್ಮಿಸಬೇಕೆಂದು ತಿಳಿಸಿದರು.
- ಸರ್ವಿಸ್ ರಸ್ತೆಗೆ ಹೊಂದಿಕೊಂಡಿರುವ ಬೀಫ್ ಶಾಪ್ ಮತ್ತು ಚಿಕನ್ ಶಾಪ್‌ಗೆ ನೀಡಿರುವ ಟ್ರೇಡ್ ಲೈಸೆನ್ಸ್‌ಅನ್ನು ರದ್ದುಗೊಳಿಸಬೇಕು.
- 1ನೇ ಮುಖ್ಯರಸ್ತೆ, 80 ಅಡಿರಸ್ತೆಯಲ್ಲಿ ವಾಣಿಜ್ಯ ಸಂಕೀರ್ಣ ಹೆಚ್ಚಾಗಿದ್ದು, ಟ್ರೇಡ್ ಲೈಸೆನ್ಸ್ ಬಗ್ಗೆ ವಿವರ ನೀಡಿ ಹಾಗೂ ಅನಧಿಕೃತ ವಾಣಿಜ್ಯ ಸಂಕೀರ್ಣಗಳ ಬಗ್ಗೆ ಮಾಹಿತಿ ನೀಡುವುದು.

4) **<u>ಶ್ರೀ ಗಂಗಾಧರ್, ಸ್ಥಳೀಯರು ಈ ಕೆಳಕಂಡ ವಿಷಯಗಳ ಬಗ್ಗೆ ವಾರ್ಡ್ ಕಮಿಟಿ ಸಭೆಯಲ್ಲಿ ಪ್ರಸ್ತಾಪಿಸಿದರು.</u>**

- ಹೆಣ್ಣೂರು ಅಡ್ಡರಸ್ತೆಯಿಂದ ವಿಲೇಜ್ ರಸ್ತೆಯ ವರೆವಿಗೂ ಇರುವ ಚರಂಡಿಯಲ್ಲಿ ಹೂಳು ತೆಗೆಯಬೇಕು.
- ಚಿಕ್ಕಣ್ಣ ಲೇಔಟ್ ನಲ್ಲಿ ಬೋರ್‌ವೆಲ್ ಪೈಪ್‌ನ್ನು ಸರಿಪಡಿಸಬೇಕು.
- ಟೆಲಿಕಾಂ ಲೇಔಟ್‌ನ, ಬೃಹತ್ ನೀರುಗಾಲುವೆ ಪಕ್ಕದಲ್ಲಿ ಹಸಿ ಕಸವನ್ನು ಹಾಕಿದ್ದು, ಅದನ್ನು ತೆರವುಗೊಳಿಬೇಕೆಂದು ತಿಳಿಸಿದರು.
- ಒಂಟಿ ಮನೆ ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡಲು ಸಭೆಯಲ್ಲಿ ಪ್ರಸ್ತಾಪಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಎಸ್.ರಾಜನ್
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ ಸದಸ್ಯರು
ವಾರ್ಡ್ ಸಂಖ್ಯೆ.24 ಹೆಚ್.ಬಿ.ಆರ್ ಲೇಔಟ್

ಅಧ್ಯಕ್ಷರು,
(ಹೆಚ್.ವಿ.ನರೇಂದ್ರ ಕುಮಾರ್)
ಸಹಾಯಕ ನಿರ್ದೇಶಕರು, ನಗರ ಯೋಜನೆ (ಉತ್ತರ) ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ.24

<u>ಪ್ರತಿಯನ್ನು:</u>

1. ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) ಪೂರ್ವ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಫ್ರೆಜರ್‌ಟೌನ್ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪೂರ್ವ) ರಸ್ತೆ ಮೂಲಭೂತ ಸೌಕರ್ಯ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ (ಪೂರ್ವ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
11. ಪೋಲೀಸ್ ಇನ್ಸ್‌ಪೆಕ್ಟರ್, (ಸಂಚಾರ) ಕೆ.ಜಿ.ಹಳ್ಳಿ ಪೋಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
12. ಪೋಲೀಸ್ ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಕೆ.ಜಿ.ಹಳ್ಳಿ ಪೋಲೀಸ್ ಠಾಣೆ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
13. ಕಲ್ಯಾಣ ಇಲಾಖೆ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
14. ಪಶು ಸಂಗೋಪನಾ ಇಲಾಖೆ, (ಪೂರ್ವ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
15. ಕಛೇರಿ ಕಡತಕ್ಕೆ.

ಸಹಾಯಕ ನಿರ್ದೇಶಕರು ( ಪಶುಪಾಲನೆ
ಪೂರ್ವ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.